ಶ್ರೀ ಎನ್. ಧರ್ಮಸಿಂಗ್ (ಮುಖ್ಯ ಮಂತ್ರಿಗಳು):

ಅ) ಕೇಂದ್ರ ಪುರಸ್ಕೃತ ರಾಷ್ಟ್ರೀಯ ಮೀನುಗಾರರ ಕಲ್ಯಾಣ ನಿಧಿ ಯೋಜನೆಯಡಿ 1987–88 ರಿಂದ 1998–99 ರವರೆಗೆ 3984 ಮನೆಗಳನ್ನು, ಮತ್ತು 1998–99 ರಿಂದ 2000–2001ರವರೆಗೆ 5000 ಮನೆಗಳನ್ನು ಮತ್ಸ್ಯ ಆಶ್ರಯ 1ನೇ ಹಂತದ ಯೋಜನೆಯಡಿ ಹಾಗೂ 2001–02 ರಿಂದ 2003–04ನೇ ಸಾಲಿನಲ್ಲಿ 5000 ಮನೆಗಳನ್ನು ಮತ್ಸ್ಯ ಆಶ್ರಯ 2ನೇ ಹಂತದ ಯೋಜನೆಯಡಿಗೆ ನಿರ್ವಸತಿ ಮೀನುಗಾರಿಗೆ ಮಂಜೂರು ಮಾಡಿದೆ.

368 (611) ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಷ್ಟದಲ್ಲಿರುವ ಸರ್ಕಾರಿ ಉದ್ದಿಮೆಗಳನ್ನು ಸರ್ಕಾರ ಪುನಶ್ಚೇತನಗೊಳಿಸಲು ಉದ್ದೇಶಿಸಿದೆಯೇ ಅಥವಾ ಮುಚ್ಚಲು ಉದ್ದೇಶಿಸಿದೆಯೇ;

ಆ) ಮುಚ್ಚಲು ಉದ್ದೇಶಿಸಿದ್ದರೆ, ಇಲ್ಲಿನ ಸಿಬ್ಬಂದಿ ಮತ್ತು ಕಾರ್ಮಿಕರ ಹಿತರಕ್ಷಣೆಗಾಗಿ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಎನ್. ಧರ್ಮಸಿಂಗ್ (ಮುಖ್ಯ ಮಂತ್ರಿಗಳು):

ಅ) ನಷ್ಟದಲ್ಲಿರುವ ಸರ್ಕಾರಿ ಉದ್ದಿಮೆಗಳನ್ನು ಪುನಶ್ಚೇತನಗೊಳಿಸಲು ಅಥವಾ ಮುಚ್ಚಲು ಸರ್ಕಾರವು ಸಚಿವ ಸಂಪುಟದ ಉಪಸಮಿತಿಯನ್ನು ನೇಮಿಸಿದೆ. ಉಪಸಮಿತಿಯು ರಾಜ್ಯ ಸಾರ್ವಜನಿಕ ಉದ್ದಿಮೆಗಳನ್ನು ಪುನಶ್ಚೇತನಗೊಳಿಸಲು ಅಥವಾ ಮುಚ್ಚಲು ಪ್ರತ್ಯೇಕ, ಪ್ರತ್ಯೇಕವಾಗಿ ಪರಿಶೀಲಿಸಿದ ನಂತರ, ಸಚಿವ ಸಂಪುಟದ ನಿರ್ಣಯದ ಮೇಲೆ ಕ್ರಮ ಕೈಗೊಳ್ಳಲಾಗುವುದು.

ಆ) ಮುಚ್ಚಲು ತೀರ್ಮಾನಿಸುವಂತಹ ಸಾರ್ವಜನಿಕ ಉದ್ದಿಮೆಗಳ ಸಿಬ್ಬಂದಿ ಮತ್ತು ಕಾರ್ಮಿಕರ ಹಿತರಕ್ಷಣೆಯನ್ನು ಕಾಪಾಡಲು ಸರ್ಕಾರದ ಆದೇಶ ದಿನಾಂಕ 10–08–2001ರ ರೀತ್ಯ ಸ್ವಯಂ ನಿವೃತ್ತಿ ಯೋಜನೆಯನ್ನು ಅನುಷ್ಠಾನ ಮಾಡಲಾಗುವುದು.

369 (613) ಶ್ರೀ ಶ್ರೀರಾಮರೆಡ್ಡಿ.ಜಿ.ವಿ. (ಬಾಗೇಪಲ್ಲಿ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಹೂಡಿದ ಬಂಡವಾಳವೆಷ್ಟು;

ಆ) ಈ ಕ್ಷೇತ್ರಗಳಿಂದ ಹೊರಬರುವ ಪದವೀಧರರು ವಿದೇಶಗಳಿಗೆ ಪಲಾಯನಗೈಯದಂತೆ ಸ್ಥಳೀಯವಾಗಿ ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗಿದೆಯೆ?

ಅ) ಸರ್ಕಾರವು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಇಲ್ಲಿಯವರೆಗೆ ಒಟ್ಟು ರೂ.12,866.05 ಲಕ್ಷವನ್ನು ಹೂಡಿರುತ್ತದೆ.

ರಾಜ್ಯದಲ್ಲಿ ಸರಾಸರಿ ವಾರಕ್ಕೆ ಎರಡು ಮಾಹಿತಿ ತಂತ್ರಜ್ಞಾನ ಕಂಪನಿ ಹಾಗೂ ತಿಂಗಳಿಗೆ ಒಂದು ಜೈವಿಕ ತಂತ್ರಜ್ಞಾನ ಕಂಪನಿಗಳು ಸ್ಥಾಪನೆಯಾಗುತ್ತಿವೆ. ಹೊಸದಾಗಿ ಸ್ಥಾಪನೆಗೊಳ್ಳುತ್ತಿರುವ ಹಾಗೂ ಈಗಾಗಲೇ ಸ್ಥಾಪನೆಗೊಂಡು ವಿಸ್ತರಣೆಗೊಳ್ಳುತ್ತಿರುವ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಉದ್ಯಮಗಳಲ್ಲಿ ಗಣನೀಯ ಪ್ರಮಾಣದ ಉದ್ಯೋಗಗಳು ಸೃಷ್ಟಿಯಾಗುತ್ತಿದ್ದು, ಆ ಕ್ಷೇತ್ರಗಳಿಂದ ಹೊರಬರುವ ಪ್ರತಿಭಾನ್ವಿತ ಪದವೀಧರರಿಗೆ ತಮ್ಮ ನೈಪುಣ್ಯತೆಗೆ ಅನುಗುಣವಾದ ಉದ್ಯೋಗಗಳನ್ನು ಸ್ಥಳೀಯವಾಗಿಯೇ ಪಡೆಯಲು ಉತ್ತಮ ಅವಕಾಶಗಳಿರುತ್ತವೆ.